# **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

## **ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 7/2020**

ಫ್ರಾಸಾ–02

ಚಾಸಾ–07

| | | |
|---|---|---|
| ಸಾಕ್ಷಿಯ ಹೆಸರು | – | ಮಂಜೂರ ಮಿಶ್ರೀಕೋಟಿ |
| ತಂದೆ ಹೆಸರು | – | ಅನ್ವರ ಅಲಿ |
| ವಯಸ್ಸು | – | 28 ವರ್ಷ |
| ಉದ್ಯೋಗ | – | ಟೈಲ್ಸ ಕೆಲಸ |
| ವಾಸಸ್ಥಳ | – | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 08-01-2024 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-6 ರವರ ಪರಿಚಯ ಇದೆ. ದಿಃ 11-9-2020 ರಂದು ಉಪನಗರ ಪೊಲೀಸಠಾಣೆಯವರು ಸಂಜೆ 4.30 ಘಂಟೆಗೆ ನನ್ನನ್ನು ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ಆರೋಪಿ ಮಾರುತಿ ಕಲ್ಲಪ್ಪ ಹರಣಶಿಕಾರಿ ಇದ್ದನು. ಆರೋಪಿಯು ತನಗೆ ಸೇರಿದ ರೆಡ್ಮಿ ಮೊಬೈಲನ್ನು ಗಾಂಜಾ ಮಾರಾಟ ಮಾಡಲು ಉಪಯೋಗಿಸಿದ್ದು ಅದನ್ನು ತೋರಿಸುತ್ತೇನೆ ಎಂದು ಹೇಳಿದನು. ಅದರಂತೆ ಆರೋಪಿತನು ನಮ್ಮನ್ನು ಮತ್ತು ಪೊಲೀಸರನ್ನು ಪಿಂಟೋ ಸರ್ಕಲ ಹತ್ತಿರ ದೇಸಾಯಿ ಕ್ರಾಸ ಹುಬ್ಬಳ್ಳಿ ಬಳಿ ಕರೆದುಕೊಂಡು ಹೋಗಿ ಖುಲ್ಲಾ ಜಾಗದಲ್ಲಿ ಇಟ್ಟಿದ್ದ ಮೊಬೈಲನ್ನು ಹಾಜರುಪಡಿಸಿದನು. ಪೊಲೀಸರು ಸದರಿ ಮೊಬೈಲನ್ನು ಅಮಾನತುಪಡಿಸಿಕೊಂಡು ಸಂಜೆ 5 ರಿಂದ 5.45 ಗಂಟೆ ಅವಧಿಯಲ್ಲಿ ಪಂಚನಾಮೆ ಬರೆದು ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಗೆ ನನ್ನೊಂದಿಗೆ ಚಾಸಾ-6 ನಿಯಾಜ ಸಹಿ ಮಾಡಿದ್ದಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ- 43 ಎಂದು

ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 43 (ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಫೋಟೊ ತೆಗೆದಿರುತ್ತಾರೆ. ಸದರಿ ಫೋಟೊಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಫೋಟೊಗಳನ್ನು ನಿಶಾನೆ ಪಿ– 44 ಮತ್ತು 45 ಎಂದು ಗುರುತಿಸಲಾಯಿತು. ಸದರಿ ಫೋಟೊದಲ್ಲಿ ನಾನು , ಆರೋಪಿ, ನಿಯಾಜ ಮತ್ತು ಪೊಲೀಸರು ಕಂಡುಬರುತ್ತೇವೆ .

2. ಆ ದಿನ ಜಪ್ತು ಮಾಡಿದ ಮೊಬೈಲ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಸದರಿ ಮೊಬೈಲನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮುಮಾ–7 ಎಂದು ಗುರುತಿಸಲಾಯಿತು. ಆರೋಪಿ ಮಾರುತಿ ಹರಣಶಿಕಾರಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಗುರುತಿಸಿದ್ದಾರೆ .

**ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಶ್ರೀ. ಟಿ ಆರ್ ಪಿ ವಕೀಲರಿಂದಃ**

3. ನಾನು ಟೈಲ್ಸ ಶೋರೂಮನಲ್ಲಿ ಕೆಲಸ ಮಾಡುತ್ತೇನೆ. ನಿಜಾಮ ನನ್ನನ್ನು ಕರೆದಿದ್ದಾನೆ. ನಿಜಾಮ ಮತ್ತು ಪೊಲೀಸರ ನಡುವಿನ ಸಂಬಂಧ ತುಂಬಾ ಚೆನ್ನಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಪಂಚನಾಮೆಗೆ ಬರಲು ನೋಟೀಸ ಕೊಟ್ಟಿಲ್ಲ. ಮೊಬೈಲನ್ನು ಅಮಾನತುಪಡಿಸಲಾಗಿದೆ ಎಂದು ಹೇಳಲಾದ ಸ್ಥಳದ ಜನನಿಬಿಡ ಸ್ಥಳ ಅಂದರೆ ಸರಿ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿದ್ದಾರೆ ಅಂದರೆ ಸರಿ. ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಪಿಂಟೊ ಸರ್ಕಲ ಹತ್ತಿರ ಪೊಲೀಸರು ಮೊಬೈಲನ್ನು ತೆಗೆದುಕೊಂಡು ಅಲ್ಲಿ ಇಟ್ಟು ಫೋಟೊ ತೆಗೆದಿದ್ದಾರೆ ಅಂದರೆ ಸರಿಯಲ್ಲ.

4. ದಿಃ 11–9–2020 ರಂದು ಉಪನಗರ ಪೊಲೀಸಠಾಣೆಯವರು ಸಂಜೆ 4.30 ಘಂಟೆಗೆ ನನ್ನನ್ನು ಠಾಣೆಗೆ ಕರೆಸಿದ್ದು ಠಾಣೆಯಲ್ಲಿ ಆರೋಪಿ ಮಾರುತಿ ಕಲ್ಲಪ್ಪ ಹರಣಶಿಕಾರಿ ಇದ್ದು ಆರೋಪಿಯು

ತನಗೆ ಸೇರಿದ ರೆಡ್ಮಿ ಮೊಬೈಲನ್ನು ಗಾಂಜಾ ಮಾರಾಟ ಮಾಡಲು ಉಪಯೋಗಿಸಿದ್ದು ಅದನ್ನು ತೋರಿಸುತ್ತೇನೆ ಎಂದು ಹೇಳಿದ್ದು ಅದರಂತೆ ಆರೋಪಿತನು ನಮ್ಮನ್ನು ಮತ್ತು ಪೊಲೀಸರನ್ನು ಪಿಂಟೋ ಸರ್ಕಲ ಹತ್ತಿರ ದೇಸಾಯಿ ಕ್ರಾಸ ಹುಬ್ಬಳ್ಳಿ ಬಳಿ ಕರೆದುಕೊಂಡು ಹೋಗಿ ಖುಲ್ಲಾ ಜಾಗದಲ್ಲಿ ಇಟ್ಟಿದ್ದ ಮೊಬೈಲನ್ನು ಹಾಜರುಪಡಿಸಿದ್ದು ಪೊಲೀಸರು ಸದರಿ ಮೊಬೈಲನ್ನು ಅಮಾನತುಪಡಿಸಿಕೊಂಡು ಸಂಜೆ 5 ರಿಂದ 5.45 ಗಂಟೆ ಅವಧಿಯಲ್ಲಿ ಪಂಚನಾಮೆ ಬರೆದು ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಗೆ ನನ್ನೊಂದಿಗೆ ಚಾಸಾ–6 ನಿಯಾಜ ಸಹಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಫೋಟೊ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ನಾನು ಈ ಪ್ರಕರಣದ ಪಂಚನಾಮೆಗೆ ಹೊರತಾಗಿ ಬೇರೆ ಯಾವುದೇ ಪಂಚನಾಮೆಗೆ ಸಹಿ ಮಾಡಿಲ್ಲ. ಹುಬ್ಬಳ್ಳಿ ಉಪನಗರ ಪೊಲೀಸಠಾಣೆಯ ಎಲ್ಲ ಪ್ರಕರಣಗಳಲ್ಲಿ ನಾನು ಖಾಯಂ ಪಂಚನಾಗಿ ಹೋಗುತ್ತೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.